ಓ.ಎಸ್. ನಂ. 4 /2017
DW-2

<u>ಸಾಕ್ಷಿಯನ್ನು ದಿನಾಂಕ: 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ವಾದಿ ಪರ ಶ್ರೀ DGT ವಕೀಲರಿಂದ</u>

1.ನಮಗೆ ಸೇರಿದ ಆಸ್ತಿಗಳ ಪಕ್ಕದಲ್ಲಿ ಇರುವ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತು. ದಾವಾ ಆಸ್ತಿಯ ಪಶ್ಚಿಮಕ್ಕೆ 2-3 ಜಮೀನುಗಳ ನಂತರ ನನಗೆ ಸೇರಿದ ಸ.ನ. 5/3 ಬರುತ್ತದೆ. ಆ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಪೂರ್ವಕ್ಕೆ ನರಸಿಂಹಯ್ಯನ ಜಮೀನು, ಪಶ್ಚಿಮಕ್ಕೆ ಹನುಮಂತರಾಯಪ್ಪನ ಜಮೀನು, ಉತ್ತರಕ್ಕೆ ನೀಲಗಿರಿ ತೋಪು, ದಕ್ಷಿಣಕ್ಕೆ ಹನುಮಂತರಾಯಪ್ಪರವರ ಜಮೀನಿನ ಚಕ್ಕುಬಂದಿ ಒಳಗಿನ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ. ಪೂರ್ವಕ್ಕೆ ಸ.ನ.7 ರ ಜಮೀನು, ಪಶ್ಚಿಮಮತ್ತು ಉತ್ತರಕ್ಕೆ ಸಿದ್ದರಾಮಯ್ಯನ ಮಗ ವೀರನಾಗಯ್ಯನ ಜಮೀನು, ದಕ್ಷಿಣಕ್ಕೆ ಮಡಿವಾಳ ಹನುಮಂತಯ್ಯರವರ ಜಮೀನಿನ ಚಕ್ಕುಬಂದಿ ಒಳಗಿನ ಜಮೀನಿನಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ. ನಂಜುಂಡಪ್ಪ ಎಂಬುವರು ಸ.ನ 6/3 ಕ್ಕೆ ಸಂಬಂಧಿಸಿದಂತೆ ಪ್ರತಿವಾದಿ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದು ಸದರಿ ದಾನ ಪತ್ರದಂತೆ ಮೇಲೆ ಹೇಳಿದ ಚಕ್ಕುಬಂದಿ ಒಳಗಿನ ಜಮೀನುಗಳಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿರುತ್ತಾರೆ. ದಾನ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾನ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಾನು ನಂಜುಂಡಪ್ಪರವರನ್ನು ನೋಡಿರುತ್ತೇನೆ.

2. ನಂಜುಂಡಪ್ಪನ ತಂದೆ ಶಿವಲಿಂಗಯ್ಯರವರನ್ನು ನಾನು ನೋಡಿರುವುದಿಲ್ಲ. ಶಿವಲಿಂಗಯ್ಯರವರಿಗೆ ಕರಿಬಸಪ್ಪ, ನಂಜುಂಡಯ್ಯ, ಗುರುಸಿದ್ದಪ್ಪ ಎಂಬ 3 ಜನ ಮಕ್ಕಳು. ಸದರಿಯವರು ವಿಭಾಗ ಮಾಡಿಕೊಂಡಿರಲಿಲ್ಲ ಒಟ್ಟಾಗಿ ಇದ್ದರು. ಶಿವಲಿಂಗಯ್ಯನ ಕುಟುಂಬಕ್ಕೆ ಸೇರಿದ ಎಷ್ಟು ಆಸ್ತಿಗಳು ಇದ್ದವೆಂದು ನನಗೆ ಗೊತ್ತಿಲ್ಲ. ಶಿವಲಿಂಗಯ್ಯನ ಕುಟುಂಬದ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿಯಲ್ಲ. ಶಿವಲಿಂಗಯ್ಯ ಮಕ್ಕಳಾದ ಕರಿಬಸಪ್ಪ, ನಂಜುಂಡಯ್ಯ, ಗುರುಸಿದ್ದಪ್ಪ ರವರು 1960 ರ

ಹಿಂದೆಯೇ ವಿಭಾಗವನ್ನು ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ವಿಭಾಗ ಮಾಡಿಕೊಂಡ ನಂತರ 3 ಜನರ ಭಾಗಕ್ಕೆ ಬಂದಿ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

3. ನಮ್ಮ ಗ್ರಾಮದ ಚಿಕ್ಕಹನುಮಂತಯ್ಯರವರನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಹೊಂದಿಕೊಂಡಂತೆ ಚಿಕ್ಕಹನುಮಂತಯ್ಯರವರ ಜಮೀನು ಬರುತ್ತದೆ. ಚಿಕ್ಕಹನುಮಂತಯ್ಯರವರು ಯಾವ ಸ.ನ ನಲ್ಲಿ, ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸ.ನಂಬರ್ ನಲ್ಲಿ 20 ಗುಂಟೆ ಜಮೀನನ್ನು ಚಿಕ್ಕಹನುಮಂತಯ್ಯರವರು ನಂಜುಂಡಯ್ಯನ ತಮ್ಮ ಕರಿಬಸವಯ್ಯರವರಿಂದ 1960 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಕ್ರಯಕ್ಕೆಪಡೆದಾಗಿನಿಂದಲೂ ಚಿಕ್ಕಹನುಮಂತಯ್ಯರವರು ಸದರಿ ಸ.ನಂಬರ್ ನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ದಾವಾ ಸ.ನಂಬರ್ ನ ಉಳಿಕೆ ಜಮೀನನ್ನು ನಂಜುಂಡಯ್ಯರವರು ವಾದಿಯ ಅಜ್ಜಿ ಗುರುಸಿದ್ದಮ್ಮರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಅಂದಿನಿಂದ ಇಲ್ಲಿಯವರೆವಿಗೂ ಸದರಿ ಜಮೀನಿನಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ನಂಜುಂಡಯ್ಯರವರಿಗೆ ದಾನ ಪತ್ರ ಬರೆದುಕೊಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಧರಣೇಶ್ ಬಾಬುರವರಿಗೆ ಸೇರಿದ ಯಾವುದೇ ಆಸ್ತಿ ಬರುವುದಿಲ್ಲ. ನನ್ನ ಜಮೀನಿನ ಅಕ್ಕಪಕ್ಕದಲ್ಲಿ ಸ.ನಂಬರ್ 6/1 ಬರುವುದಿಲ್ಲ. ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಸ. ನಂ 6/1 ಬರುವುದಿಲ್ಲ. ಸ.ನಂಬರ್ 6/1 ಮತ್ತು ಸ.ನಂಬರ್ 6/3 ಅಕ್ಕಪಕ್ಕದಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ.ನಂಬರ್ ಗಳನ್ನು ನಂಜುಂಡಯ್ಯರವರು ವಾದಿಯ ಅಜ್ಜಿ ಗುರುಸಿದ್ದಮ್ಮರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಗುರುಸಿದ್ದಮ್ಮರವರ ಹೆಸರಿಗೆ ಖಾತೆ ಆಗಿದ್ದು, ಅವರು ಮೃತಪಟ್ಟನಂತರ ಸದರಿ ಆಸ್ತಿಯ ಖಾತೆಯು ಅವರ ಮಕ್ಕಳಾದ ಶಿವಮ್ಮ ಮತ್ತು

ಗಂಗಮ್ಮರವರಿಗೆ ಬಂದಿದ್ದು ನಂತರ ಸದರಿ ಶಿವಮ್ಮ ಮತ್ತು ಗಂಗಮ್ಮರವರು ವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ವಾದಿ ಧರಣೇಶ್ ಬಾಬುರವರಿಗೆ 34 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಧರಣೇಶ್ ಬಾಬುರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನನಗೇನು ಗೊತ್ತಿಲ್ಲದೆ ಇದ್ದರು ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**